# ಸತ್ಯಕ್ಕನ ವಚನಗಳಲ್ಲಿ ವೈಚಾರಿಕ ಪ್ರಜ್ಞೆ

**ಡಾ. ಮಹಾದೇವಿ ಆರ್. ಹಿರೇಮಠ**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ

ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ 12ನೇ ಶತಮಾನ ಪರಿವರ್ತನೆಯ ಯುಗ, ಜಡ್ಡುಗಟ್ಟಿದ ವ್ಯವಸ್ಥೆಯ ನಡುವೆಯೇ ಚಲನಶೀಲ ಸಂಸ್ಕೃತಿಯೊಂದದನ್ನು ಹುಟ್ಟುಹಾಕಲು ಪ್ರಯತ್ನಿಸಿದ ಯುಗ. ಉತ್ಕೃಷ್ಟ, ನಿಕೃಷ್ಟರ ನಡುವಿನ ಅಂತರವನ್ನು ಅಳಿಸಿಹಾಕಿ ಶ್ರೇಣಿರಹಿತ ಸಮಾಜವನ್ನು ಸ್ಥಾಪಿಸಲು ಯತ್ನಿಸಿದ ಯುಗ. ಸಾಮಾಜಿಕವಾಗಿ, ಧಾರ್ಮಿಕವಾಗಿ ಆರ್ಥಿವಾಗಿ, ನೈತಿಕವಾಗಿ, ಆಧ್ಯಾತ್ಮಿಕವಾಗಿ, ತನ್ನ ಅಸ್ತಿತ್ವದಲ್ಲಿಯೇ ನಂಬಿಕೆಯನ್ನು ಕಳೆದುಕೊಂಡು ಜನಸಾಮಾನ್ಯನಿಗೆ ಅವನ ಅರಿವನ್ನೇ ಅವನಿಗೆ ಗುರುವಾಗಿಸಿ, ಅವನಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿ. ಅವನ ಬರಡಾದ ಬದುಕಿನಲ್ಲಿ ತನಿರಸವನ್ನು ತುಂಬಿದ ಯುಗ. ಈ ಪರಿವರ್ತನಾಶೀಲ ಯುಗದ ಪ್ರವರ್ತಕರೇ ಬಸವಾದಿ ವಚನಕಾರರು. ಈ ದಿಸೆಯಲ್ಲಿ ವಿಭಿನ್ನ ವರ್ಗಸ್ತರಗಳಿಗೆ ಸಂಬಂಧಿಸಿದ ನೂರಾರು ಸ್ತ್ರೀ ಪುರುಷರು ಆಧ್ಯಾತ್ಮ ಸಾಧಕರಾಗಿ, ಸಾಮಾಜಿಕ ಚಿಂತಕರಾಗಿ, ಅನುಭಾವ ಸಾಹಿತ್ಯ ರಚಿಸುವಂತೆ ಪ್ರೇರೇಪಿಸಿದ ವಚನಯುಗದ ಸಾಂಸ್ಕೃತಿಕ ಒತ್ತಡಗಳು, ಸಾಂದರ್ಭಿಕ ಅಗತ್ಯಗಳು, ವೈಚಾರಿಕ ಪರಿಸರ ನಿರ್ಮಾಣದ ಪ್ರಯತ್ನಗಳ ಇತಿಹಾಸ ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಒಂದು ಕುತೂಹಲಕಾರಿ ಅಧ್ಯಯನ.

ಸಶಕ್ತ ವರ್ಗವೊಂದರ ಅನಾರೋಗ್ಯಕರವಾದ ಸ್ವಾರ್ಥ ಪ್ರೇರಿತ ನಿರ್ಣಯಗಳ ನಿಯಂತ್ರಣದಲ್ಲಿ ಮಾನವೀಯ ಸಂಬಂಧಗಳು ವಿಕೃತಗೊಂಡು ಸಾಮಾಜಿಕ ಸ್ವಾಸ್ಥ್ಯವೇ ಹದಗೆಟ್ಟ ಸಂದರ್ಭದಲ್ಲಿ ದಾರ್ಶನಿಕವಾಗಿ ಉದಿಸಿಬಂದ ಶಿವಶರಣರು, ತಾವು ಕಂಡುಂಡ ಸತ್ಯವನ್ನು ತಮಗೆ ತೋರಿದ ದರ್ಶನವನ್ನು ವಚನಗಳಲ್ಲಿ ವಿನ್ಯಾಸಗೊಳಿಸುವುದರ ಮೂಲಕ ಅವರು ಪ್ರತಿಪಾದಿಸಿದ ಜೀವನ ಮೌಲ್ಯಗಳು ಪ್ರಾಪಂಚಿಕ ಬದುಕಿನ ಪರಿಧಿಯನ್ನು ವಿಸ್ತಾರಗೊಳಿಸಿದವು. ಜೀವ–ಜೀವರ ನಡುವಿನ ಸಂಬಂಧಗಳನ್ನು ಮಾನವೀಕರಣಗೊಳಿಸುವುದರೊಂದಿಗೆ ಜೀವನದಲ್ಲಿ ಉದಾತ್ತ ಪಾರಮಾರ್ಥಿಕ ಪ್ರವೃತ್ತಿಯ ಅಗತ್ಯವನ್ನು ಬಿಂಬಿಸಿದವು. ಜೀವ–ಜಗತ್ತಿನ ಸಂಬಂಧದ ನೈಜನೆಲೆಗಳನ್ನು ಅನ್ವೇಷಿಸುವ ದಾರಿದೀಪಗಳಾದವು. ಬಸವಾದಿ ಶರಣರು ಬದುಕನ್ನು ಮಾನವೀಯ ನೆಲೆಯಲ್ಲಿ ಅರ್ಥೈಸಿ, ದೈವೀ ನೆಲೆಯಲ್ಲಿ ಸ್ಥಿರಗೊಳಿಸಿ, ಪರಿಪೂರ್ಣತೆಗಾಗಿ ಸಜ್ಜುಗೊಳಿಸಲು ಯತ್ನಿಸಿ, ಈ ಮಹಾಮಣಿಹಕ್ಕಾಗಿ ವಚನರಚನೆಯ ಮೂಲಕ ವೈಚಾರಿಕ ಚಳುವಳಿಗೆ ಚಾಲನೆ ನೀಡಿದರು.

ಶಿವಶರಣರು ಮಾನವೀಯತೆಯನ್ನು ಅರಿವು, ಆಚಾರ, ಸನ್ಮಾರ್ಗ, ಸದಭಿಮಾನ, ಸತ್ಕರ್ಮ, ಸದ್ವಿಚಾರಗಳಿಗೆ ಆಯಾಮಗೊಳಿಸಿ ಸಾಮಾಜಿಕ ಧಾರ್ಮಿಕ ಪ್ರಕ್ರಿಯೆಯಲ್ಲಿ ಬೇರುಬಿಟ್ಟ ಜಡತೆಯನ್ನು ನೀಗಿಸಿ, ವಿವೇಕಯುತ ಅನುಭವಶೀಲ ನೆಲೆಯಲ್ಲಿ ಬದುಕನ್ನು ರೂಪಿಸಿ, ಜಾಗತಿಕ ಮಟ್ಟದಲ್ಲಿ ಅರುಹಿದ್ದು, ಶ್ರೇಣಿರಹಿತ, ಲಿಂಗಭೇದರಹಿತ, ಕೇವಲ ಮಾನವ ಸಮಾಜವನ್ನು ಕಟ್ಟಲು ಹೊರಟಿದ್ದು, ಅನುಪಮವಾದ ಸಾಧನೆ. ಸಂಸ್ಕೃತಿ ಜಡಗೊಂಡು, ಮಾನವೀಯ ಸಂವೇದನೆಗಳೆಲ್ಲ ಸವಕಳಿಯಾಗಿ, ಸ್ಥಾಪಿತ ಮೌಲ್ಯಗಳು ಅಧಿಕಾರದ ಗದ್ದುಗೆ ಏರಿ ರಾರಾಜಿಸುವಾಗ ಅದರ ವಿರುದ್ಧ ಧ್ವನಿಯೆತ್ತಿ ಖಂಡಿಸಿ, ಸಾಂಪ್ರದಾಯಿಕ ನೈತಿಕತೆಯ ಹೆಸರಿನಲ್ಲಿ ಸುಳಿದ ಖೋಟಾತನವನ್ನು ಬಯಲಿಗೆಳೆದು ಸಾರ್ವಕಾಲಿಕ ಮೌಲ್ಯದ ವಚನ ಸಾಹಿತ್ಯವನ್ನು ಕೊಟ್ಟದ್ದು ಗರ್ಮನಾರ್ಹವಾದ ವಿಷಯ.

ಜಾತಿವರ್ಗಗಳಂತೆ ಲಿಂಗತಾರತಮ್ಯದ ನಂಬಿಕೆ, ಸಾಂಪ್ರದಾಯಿಕವಾಗಿ ಮಾನವ ಜನಾಂಗದ ಇತಿಹಾಸದುದ್ದಕ್ಕೂ ಸಾಗಿಬಂದದ್ದಕ್ಕೆ, ಅಶಕ್ತ ವರ್ಗವೊಂದರ ಮೇಲೆ ಸಶಕ್ತ ವರ್ಗವು ನಡೆಸಿದ ದಬ್ಬಾಳಿಕೆ ಅಟ್ಟಹಾಸಕ್ಕೆ, ಚರಿತ್ರೆಯ ಪುಟಗಳೇ ಸಾಕ್ಷಿಯಾಗಿವೆ. ಹೆಣ್ಣನ್ನು ನಿಕೃಷ್ಟವಾಗಿ ಪರಿಗಣಿಸಿ ಪುರುಷ ಪ್ರಧಾನ ವ್ಯವಸ್ಥೆ ಅವಳನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ, ನೈತಿಕವಾಗಿ, ಶೋಷಣೆಗೀಡುಮಾಡುತ್ತ ಅವಳ ಪ್ರತಿಭೆಯನ್ನು ನಿರಂತರವಾಗಿ ದಮನಗೊಳಿಸುತ್ತಲೇ ಸಾಗಿದ್ದು ಸರ್ವವಿದಿತವಾದದ್ದು. ವೇದ ಕಾಲದಲ್ಲಿ ಮಹಿಳೆಯ ಬದುಕೇ ದುಸ್ತರವಾಗಿದು ಸ್ತ್ರೀ ಸ್ವಾತಂತ್ರ್ಯಕ್ಕೆ ಅನರ್ಹಳು. ಅವಳು ರಕ್ಕಸಿಗೆ ಸಮಾನ, 'ಪತಿಂ ಶುಶ್ರೂಷತೇ ಏನ ತೇನ ಸ್ವರ್ಗೇ ಮಹೀಯತೇ' ಅಂದರೆ ಪತಿಯ ಸೇವೆಯಿಂದಲೇ ಮಹಿಳೆಗೆ ಸ್ವರ್ಗಲೋಕದಲ್ಲಿ ಗೌರವಸ್ಥಾನ ಪ್ರಾಪ್ತವಾಗುತ್ತದೆ ಎಂದಲ್ಲ ಹೇಳಿ ಅದಕ್ಕಾಗಿ ಸಂಹಿತೆಯನ್ನೇ ರಚಿಸಿದ ಮನು ಮಹಾಶಯನ ಧ್ವನಿ ಕೇವಲ ಅವನೊಬ್ಬನ ಧ್ವನಿಯಾಗಿರದೇ ಅಂದಿನಿಂದ ಇಂದಿನವರೆಗೆ ಭಾರತೀಯ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ವಜ್ರಸಂಕೋಲೆಯ ಸಂಕೇತವಾಗಿದೆ. ಹೆಣ್ಣಿನ ಬಗ್ಗೆ ಕೇವಲ ಭಾರತೀಯರಷ್ಟೇ ಅಲ್ಲ ಮುಂದುವರಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಅನಾದರ ತಾತ್ಸಾರ ಮನೋಭಾವಗಳನ್ನು ಕಾಣಬಹುದು. ಜಾಗತಿಕ ಧೋರಣೆಯಲ್ಲಿ ಮಹಿಳೆ ಅಂದು ದ್ವಿತೀಯ ದರ್ಜೆಯ ಪ್ರಜೆ. ಹೆಣ್ಣಿನ ಬಗ್ಗೆ ಕೀಳರಿಮೆ, ಹೆಣ್ಣು ಇಟ್ಟ ಹೆಜ್ಜೆಗೆ ಅನಾದರ, ಜ್ಞಾನ ಪುರುಷನ ಗೌರವ ಹೆಚ್ಚಿಸಿದರೆ, ಅಜ್ಞಾನ ಸ್ತ್ರೀಯರ ಸೌಂದರ್ಯ ಹೆಚ್ಚಿಸುತ್ತದೆ, ಎಂದು ಚೀನಿ ಗಾದೆಯೊಂದು ಹೇಳಿದರೆ 'ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು, ಜಗತ್ತಿನಲ್ಲಿ ಪಾಪವನ್ನು ತಂದವಳೇ ಹೆಣ್ಣು. ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ. ಅವರ ಮುಕ್ತಿಗೆ ಉಪಾಯವೇ ಇಲ್ಲ' ಎಂಬುದಾಗಿ ತನ್ನ ಕಟುವಾದ ಹೇಳಿಕೆಯನ್ನು ನೀಡಿ ಮಹಿಳೆಯನ್ನು ಪಶು ವರ್ಗಕ್ಕೆ ತಳ್ಳಿದ್ದಾನೆ ಸೇಂಟ್ ಪಾಲ್. 'ಸ್ತ್ರೀಯು ಬುದ್ಧಿವಂತಳಾಗುವದಕ್ಕೆ ಬಯಸುವುದು ಮಹಾಪಾಪ' ಎಂಬ ಮಾರ್ಟಿನ್ ಲೂಥರ್‌ನ ಅಮಾನವೀಯ ಅಭಿಪ್ರಾಯದಲ್ಲಿ 'ಹೆಣ್ಣಾಗಿ ಹುಟ್ಟಿದುದೇ ತಪ್ಪು' ಎಂಬ ಅತ್ಯಂತಿಕ ಪ್ರಕ್ರಿಯೆ ಇದೆ. ಈ ರೀತಿಯಾಗಿ ಪುರುಷ ವರ್ಗದ ನಿರಂತರ ಶೋಷಣೆಯ ದಳ್ಳುರಿಗೆ ಸಿಲುಕಿ ದಗ್ಧರಾದ ಸ್ತ್ರೀ ಸಮಾಜಕ್ಕೆ ಸಾಮಾಜಿಕ, ಧಾರ್ಮಿಕ, ಆರ್ಥಿಕ, ವೈಚಾರಿಕ ಸ್ವಾತಂತ್ರ್ಯವನ್ನು ತಂದುಕೊಟ್ಟದ್ದು 12ನೇ ಶತಮಾನದ ಶಿವಶರಣರ ವಿಚಾರಧಾರೆ. ಕುಲಶೀಲಗಳನ್ನೆಣಿಸದೆ ಅಕ್ಷರ ಜ್ಞಾನದೊಂದಿಗೆ ಅರಿವನ್ನು ಮೂಡಿಸಿ ಆರ್ಥಿಕ ಬಲದೊಂದಿಗೆ ಆಧ್ಯಾತ್ಮ ಮಾರ್ಗವನ್ನು ತೋರಿ ಮಹಿಳೆಯರ ಹಾಗೂ ಶೋಷಿತ ವರ್ಗದವರ ಸಂವೇದನೆಗಳಿಗೆ, ಹೊಸ ಅನುಭವಗಳಿಗೆ, ಮುಕ್ತ ಅವಕಾಶವನ್ನು ಕಲ್ಪಿಸಿದ್ದರಿಂದ, ಒಟ್ಟಾರೆ ಸಾಮದಾಯಿಕ ಬದುಕಿನಲ್ಲಿಯೇ ಕ್ರಿಯಾತ್ಮಕ ಚಲನಶೀಲತೆ ಉಂಟಾಯಿತು. ಅರಿಯದ ಮನಕ್ಕೆ ಅರುಹಿನ ಮಹತಿ ತಿಳಿದರೆ ಮರೆವು ದೆಸೆಗೆಟ್ಟು ಓಡುವಂತೆ ಮಹಿಳಾ ಲೋಕ ಮೊದಲ ಬಾರಿಗೆ ಕಣ್ತೆರೆಯಿತು. ತಮ್ಮ ತಮ್ಮ ವೃತ್ತಿಗಳಲ್ಲಿಯೇ ಪರಶಿವನನ್ನು ಕಂಡುಕೊಂಡು ಅರಿವಿನ ಆಚಾರಕ್ಕೆ ಅನುಭಾವದ ವಿಚಾರಗಳನ್ನು ಸಮ್ಮಿಳಿತಗೊಳಿಸಿ, ವಚನಗಳಲ್ಲಿ ಅಭಿವ್ಯಕ್ತಗೊಳಿಸಿ, ತಮ್ಮ ತಮ್ಮ ಬೌದ್ಧಿಕ ಪ್ರೌಢಿಮೆ ಪ್ರದರ್ಶಿಸಿದರು. ಅನುಭವ ಮಂಟಪದ ಅನುಭಾವ ಗೋಷ್ಠಿಯ ಅಧ್ಯಾತ್ಮಿಕ ಚರ್ಚೆಗಳಲ್ಲಿ ಪಾಲ್ಗೊಂಡು ಮಹಿಳೆಯರಿಗೆ ಮುಚ್ಚಿದ ಬಾಗಿಲುಗಳಾಗಿದ್ದ ಭಕ್ತಿ–ಜ್ಞಾನ–ವೈರಾಗ್ಯ–ಯೋಗ ಮಾರ್ಗಗಳಲ್ಲಿ ಸಮರ್ಥ ಸಾಧಕಿಯರಾಗಿ ಶ್ರೇಷ್ಠ ಅನುಭಾವಿಗಳಾಗಿ ಹೊರಹೊಮ್ಮಿದರು. ಹೀಗೆ ಸಮಷ್ಠಿಯ ವಿಸ್ತೃತ ಅನುಭವಕ್ಕೆ ಸ್ಪಂದಿಸಿ ವೈಚಾರಿಕವಾಗಿ ಚಿಂತಿಸಿ ಆಧ್ಯಾತ್ಮಿಕವಾಗಿ ಆರಳಿಕೊಂಡು ಸ್ತ್ರೀ ಶಕ್ತಿಯ ಅವ್ಯಕ್ತ ನೆಲೆಗಳನ್ನು ಪ್ರಕಟಪಡಿಸಿದ, ಶಿವಶರಣೆಯರ ಮಾಲಿಕೆಯಲ್ಲಿ ಜೀವ ತುಂಬಿ ನಿಲ್ಲುವ ಸಾಧಕಿ, ಶಿವಶರಣೆ ಸತ್ಯಕ್ಕನೂ ಒಬ್ಬಳು. ಅಂಕಿತ ನಾಮವೇ ಅನ್ವರ್ಥವಾಗಿ ಸಾರ್ಥಕತೆಯನ್ನು ಪಡೆದುಕೊಂಡಂತೆ 'ಶಿವನನ್ನಲ್ಲದೆ ಅನ್ಯ ದೈವವ ಪೂಜಿಸೆ, ಶಿವಶಬ್ದವನ್ನಲ್ಲದೆ ಅನ್ಯ ದೈವದ ಶಬ್ದವ ಕೇಳೆ'ನೆಂಬ ಅಚಲವಾದ ಸತ್ಯ ಶುದ್ಧವಾದ, ಏಕದೇವತಾ ನಿಷ್ಠೆಯ ನಿಬ್ಬೆರಗಿನಲ್ಲಿ ಬದುಕಿದ ಸತ್ಯಶರಣೆ.

ಸತ್ಯಕ್ಕನ ಶಿವನಿಷ್ಠಾಪಾರಮ್ಯದ ಪ್ರಸಂಗವನ್ನು, ಶಿವಶರಣ ಆದಯ್ಯನ ಎರಡು ವಚನಗಳಲ್ಲಿ, ಹರಿಹರನ ಲಿಂಗಾರ್ಚನೆಯ ರಗಳೆ, ನಂಜುಂಡ ಕವಿಯ ಭೈರವೇಶ್ವರ ಕಾವ್ಯ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಶಾಂತಲಿಂಗ ದೇಶೀಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಪಾಲ್ಕುರಿಕೆ ಸೋಮನಾಥನ ಸೋಮೇಶ್ವರ ಪುರಾಣ, ಬಸವರಾಜ ವಿಜಯಂ, ಪುರಾತನ ದೇವಿಯರ ತ್ರಿವಿಧಿ, ಸರ್ವಜ್ಞನ ತ್ರಿಪದಿಗಳು, ಮುಪ್ಪಿನ ಷಡಕ್ಷರಿಯ ಹಾಡುಗಳು, ಮೊದಲಾದ ಜಾನಪದ ಹಾಡುಗಳಲ್ಲಿಯೂ ಹಾಗೂ ಸುವ್ವಾಲೆ, ಜೋಗುಳ ಮೊದಲಾದ ಜಾನಪದ ಹಾಡುಗಳಲ್ಲಿಯೂ ಕಾಣಬಹುದು. ಅಜಗಣ್ಣ–ಮುಕ್ತಾಯಕ್ಕಗಳ ಅಗಲಿಕೆಯ ಪ್ರಸಂಗವನ್ನು ತನ್ನ ವಚನಗಳಲ್ಲಿ ಉಲ್ಲೇಖಿಸುವದರಿಂದ, ಸತ್ಯಕ್ಕನನ್ನು ಬಸವಣ್ಣನವರ ಸಮಕಾಲೀನೆ, ಎಂದು ನಿರ್ಣಯಿಸುವಲ್ಲಿ ಎರಡು ಮಾತಿಲ್ಲ.

ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ ಸಮೀಪದ ಹಿರೇಜಂಬೂರಿನ 'ಶಂಭು ಜಕ್ಕೇಶ್ವರ'ನ ಭಕ್ತೆಯಾಗಿದ್ದ ಸತ್ಯಕ್ಕ ಶಿವ ಭಕ್ತರ ಮನೆಯ ಕಸಗೂಡಿಸುವ ಕಾಯಕದಲ್ಲಿ ನಿರತಳಾಗಿದ್ದಳೆಂಬುದಾಗಿ ತಿಳಿದು ಬರುತ್ತದೆ. ಭಿಕ್ಷುಕ ವೇಷದಲ್ಲಿ ಬಂದ ಶಿವನ ಬಾಯಿಯಿಂದ 'ಹರಿ' ಎಂಬ ಅನ್ಯದೈವದ ಹೆಸರನ್ನು ಕೇಳಿ ಸಹಿಸಿಕೊಳ್ಳಲಾಗದೇ ಕೈಯಲ್ಲಿರುವ ಸಟ್ಟುಗದಿಂದಲೇ ಹೊಡೆದು ಶಿವನಿಷ್ಠಾಪಾರಮ್ಯವನ್ನು ಮೆರೆದು ಕೊನೆಗೆ ಶಿವನಲ್ಲಿಯೇ ಐಕ್ಯಳಾದವಳು. 'ಶಂಭು ಜಕ್ಕೇಶ್ವರ'ನ ಅಂಕಿತದಲ್ಲಿ ರಚಿಸಿದ ಇದುವರೆಗೆ ಉಪಲಬ್ಧವಾದ ಅವಳ 29 ವಚನಗಳು ಸಂಖ್ಯಾಪ್ರಮಾಣದ ದೃಷ್ಟಿಯಿಂದ ಕಡಿಮೆಯೆನಿಸಿದರೂ ಸಮಕಾಲೀನ ಸಂದರ್ಭದ ಸತ್ವವನ್ನು ಹೊತ್ತು ತರುವಲ್ಲಿ ಅವು ತುಂಬಾ ಮಹತ್ವಪೂರ್ಣವಾಗಿವೆ. ಶಿವಪಾರಮ್ಯತೆ, ಸ್ತ್ರೀ ಪುರುಷ ಸಮಾನತೆ, ಸತಿಪತಿಭಾವ, ಸದ್ಭಕ್ತರ ಮಹಿಮೆ, ಸದಾಚಾರದಲ್ಲಿ ನಡೆಯುವ ಗುರು–ಶಿಷ್ಯ, ಜಂಗಮರ ಗುಣಲಕ್ಷಣಗಳ ವರ್ಣನೆ, ಡಾಂಭಿಕ ಗುರು–ಶಿಷ್ಯ ಮತ್ತು ಭವಿಗಳ ಟೀಕೆ, ವ್ರತ–ಆಚಾರ–ಶೀಲ ಸಂಬಂಧೀ ವಿಚಾರಗಳು, ಇವೇ ಮೊದಲಾದ ವಿಷಯಗಳು ಸತ್ಯಕ್ಕನ ವಚನಗಳ ಸ್ಥಾಯಿಯಾಗಿವೆ.

ಸಾಧನೆಯ ಆರಂಭದಲ್ಲಿ ಭಕ್ತಸ್ಥಲದ ಭಕ್ತನೊಬ್ಬನ ಮಾನಸಿಕ ತೊಳಲಾಟದ ಸ್ಥಿತಿಯನ್ನು ಸತ್ಯಕ್ಕನ ವಚನದಲ್ಲಿಯೂ ಕಾಣಬಹುದು.

"ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ?
ಏಕೆನ್ನ ಘೋರ ಸಂಸಾರದಲ್ಲಿರಿಸಿದೆ?
ಏಕೆನಗೆ ಕರುಣಿಸಲೊಲ್ಲದೆ ಕಾಡಿಹೆ?
ಎಕೆ ಹೇಳಾ ಎನ್ನ ಲಿಂಗವೇ, ಆನುಮಾಡಿದ ತಪ್ಪೇನು?
ಸಾಕಲಾಗದೆಂದು ಅಕ್ಕೊತ್ತಿ ನೂಕಿದಡೆ
ಏಕೆ ನಾ ನಿಮ್ಮ ಬಿಡುವೆ ಶಂಭು ಜಕ್ಕೇಶ್ವರಾ?"[1]

ಎಂಬುದಾಗಿ ಜನನ–ಮರಣಗಳ ನಡುವಿನ ಘೋರ ಸಂಸಾರದಲ್ಲಿ ಸಿಲುಕಿದ ತನ್ನ ಮಾನಸಿಕ ಬಳಲಿಕೆ ತೋರ್ಪಡಿಸಿಕೊಳ್ಳುವ ಸತ್ಯಕ್ಕೆ 'ಶಿವನು ಪೊರೆಯದಿದ್ದರೆ ನಾನು ಅವನನ್ನು ತೊರೆಯೆನೆಂದು' ಧೈರ್ಯದಿಂದ ಹೇಳುತ್ತಾಳೆ. ಹುಟ್ಟು–ಸಾವುಗಳ, ಕಷ್ಟ–ಸುಖಗಳ, ಇಹ–ಪರಗಳ, ಪಾಪ–ಪುಣ್ಯಗಳ ಹಂಗುಹರಿಯುವ ಗುರುಕರುಣೆ–ಹರ ಕರುಣೆಯನ್ನು ಪಡೆಯಲು ಹಂಬಲಿಸುತ್ತಾಳೆ. ಅಲ್ಲದೆ ಓಡು ದೇಹದ, ಶಿರ ಬಿಗಿದು, ಮಡುಗಟ್ಟಿ, ಕಂಬನಿಯ ಕಡಲೊಳಗೆ ತೇಲಾಡುತ್ತಿದ್ದರೂ, ಅವಳಿಗೆ ಅನ್ಯ ನುಡಿ ಸಮನಿಸದು ಎಷ್ಟೇ ಸಂಕಷ್ಟಗಳು ಎದುರಾದರೂ ಶಂಭುಜಕ್ಕೇಶ್ವರನನ್ನಲ್ಲದೇ ಅನ್ಯ ದೈವವ ಭಜಿಸದಿಹ ಅಚಲ ನಿಷ್ಠೆ ಅವಳದು.

ಅವಳ ಕೆಲವು ವಚನಗಳು ಶಿವಪಾರಮ್ಯತೆಯನ್ನು ಎತ್ತಿ ಹಿಡಿಯುತ್ತವೆ. ವೇದಾತೀತ, ನಾದಬಿಂದು ಕಳಾತೀತ, ಶಾಸ್ತ್ರ ಆಗಮಗಳಿಗೂ ಅತೀತನಾದ, ಪರಬ್ರಹ್ಮಸ್ವರೂಪಿಯಾದ ಶಿವನು, ಸಾಧು ಸಜ್ಜನ ಸದ್ಭಕ್ತರಿಚ್ಛೆಗೆ ಮಣಿದು ಅಂಗೈಯೊಳಗಣ ಲಿಂಗ ದೇವನಾದ. ಆ ದೇವರ ಸಾಮಾನ್ಯನಲ್ಲ. ಅವಳ ದೃಷ್ಟಿಯಲ್ಲಿ ಗಂಡ ಗಂಡರ ಎದೆಯ ಮೆಟ್ಟಿದವನು. ಗಂಡ ಗಂಡರ ಚರ್ಮವ ಹೊದ್ದವನು. ಗಂಡಗಂಡರ ಭಸ್ಮ ಮಾಡಿ ಹೂಸಿದವನು, ಕಾಲಲ್ಲಿ ಕಣ್ಣುಳ್ಳವನು, ಕರದಲ್ಲಿ ಬ್ರಹ್ಮ ಕಪಾಲವುಳ್ಳವನು, ಗಂಡು ವೇಷವೆಂಬುದು ಶಕ್ತಿ ರೂಪು, ಅವನು ನುಡಿದದ್ದೇ ಮಾತು, ನಡೆದದ್ದೇ ದಾರಿ, ಜಗದೊಳಗೊಬ್ಬನೆ ಗಂಡ, ಗಂಡರ ಗಂಡನವನು. ಅಷ್ಟೇ ಅಲ್ಲದೆ ಅವನು ಬಾಣನ ಬಾಗಿಲು ಕಾಯ್ದವನು, ಚನ್ನನ ಮನೆಯಲುಂಡವನು, ನಂಬಿಯಣ್ಣನಿಗೆ ಕುಂಟಣಿಯಾದವನು, ಶಿರಿಯಾಳನ ಮಗನ ಕೊಂದವನು, ದಾಸಿಮಯ್ಯನ ವಸ್ತ್ರವನು ಹರಿದವನು, ಸಿಂಧುಬಲ್ಲಾಳನ ವಧುವನ್ನು ಬೇಡಿದವನು, ನಾರಿಯರಿಬ್ಬರೊಡನೆ ಬಾಳುವವನಾದ ಶಿವನೇ ಈ ಎಲ್ಲ ನಿನ್ನ ವಿಕೃತ ವ್ಯವಹಾರಗಳು ನಿನ್ನ ಹಿರಿತನಕ್ಕೆ ಯೋಗ್ಯವಾದವುಗಳೇ? ಎಂದು ಶಿವನಿಗೆ ದಿಟ್ಟಿಯಾಗಿ ಪ್ರಶ್ನಿಸುವ ಸತ್ಯಕ್ಕನಲ್ಲಿ ಮಾಹೇಶ್ವರ ಸ್ಥಲದ ನಿಷ್ಠುರ ಭಕ್ತಿಯ ದೃಢ ನಿಲುವಿದೆ. ದೇವ ಭಕ್ತಾಧೀನ ಅದರೂ ಒಲಿಯುವನು.

"ದೇವನೊಳ್ಳಿದನೆಂದು ಮುಯ್ಯಾನಬೇಡ
ತಟಕಟ ಕಾಡುವ ನೊಳ್ಳಿಹನೆ?
ಅಳಿಸುವ ನಗಿಸುವನೊಳ್ಳಿಹನೆ?
ಬೆಚ್ಚದೆ ಬೆದರದೆ ತೊತ್ತತನವ ಮಾಡಲು ತನ್ನನೀವ ಶಂಭು ಜಕ್ಕೇಶ್ವರನು"[2]

ಭಕ್ತರನ್ನು ಆಳಿಸಿ–ನಗಿಸಿ ಪರಿಪರಿಯಿಂದ ಕಾಡಿ–ಬೇಡಿ, ಬೆದರದೆ ಬೆಚ್ಚದೆ ಇದ್ದರೆ ಕೊನೆಗೆ ಪರಮಾತ್ಮ ತನ್ನನ್ನೇ ತಾನು ಅರ್ಪಿಸಿಕೊಳ್ಳುತ್ತಾನೆ. ಈ ರೀತಿಯಾಗಿ ಅವನನ್ನು ಒಲಿಸಿಕೊಂಡ ಭಿಲ್ಲಮರಾಯ, ಗೊಲ್ಲಾಳ, ಕೆಂಭಾವಿ ಭೋಗಣ್ಣ, ದಾಸ ದುಗ್ಗಳೆಯರು, ಸಿರಿಯಾಳ–ಚೆಂಗಳೆಯರು, ಸಿಂಧು ಬಲ್ಲಾಳ ಮೊದಲಾದ 'ಸಾತ್ವಿಕ ಸದ್ಭಕ್ತರ ಮಹಿಮೆಗೆ' ತಲೆಬಾಗಿದ ಸತ್ಯಕ್ಕನಲ್ಲಿ ಭಕ್ತಿಯ ಉತ್ಕಟತೆಯನ್ನು ಕಾಣಬಹುದು.

ಗಂಡು–ಹೆಣ್ಣು, ಶ್ರೇಷ್ಠ–ಕನಿಷ್ಠಗಳಿಗೆ ಕಾರಣವಾಗಿ, ಸರಳ ಸಹಜ ಬದುಕಿಗೆ ಮಾರಕವಾದ, ಅಜ್ಞಾನ–ಸ್ವಾರ್ಥಭರಿತವಾದ ಅಂದಿನ ವ್ಯವಸ್ಥೆಯಲ್ಲಿ 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ, ಗಂಡೆಂಬರು ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ' 'ನಿಡಿದೊಂದು ಕೋಲ ಕಡಿದೆರಡು ಮಾಡಿ. ಒಡನೆಯೆ ಮಸೆದೊಡೆ ನಡುವೆ ಹುಟ್ಟಿದ ಬೆಂಕಿ ಹೆಣ್ಣೋ? ಗಂಡೋ? ಎಂದು ಪ್ರಶ್ನಿಸುತ್ತ ಗಂಡು ಹೆಣ್ಣಿನ ನಡುವೆ ಅಭೇದವನ್ನು ಕಲ್ಪಿಸಿದ ಆದ್ಯ ವಚನಕಾರ ಜೇಡರ ದಾಸಿಮಯ್ಯನವರ ನುಡಿ ಅಂದಿನ ಸ್ತ್ರೀ ಸಮಾಜಕ್ಕೆ ಚೇತೋಹಾರಿಯಾಗಿ ಪರಿಣಮಿಸಿತ್ತು, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ ಆದಿಯಾಗಿ ಸಮಸ್ತ ಶರಣರ ಸಮುದಾಯವೇ ಸ್ತ್ರೀ ಪುರುಷರ ನಡುವಿನ ಭೇಧವನ್ನು ಹೊಡೆದುಹಾಕಿ ಅಂತರಂಗ ಸಾಧನೆಗೆ ಸರ್ವರೂ ಸಮಾನರೆಂಬ ಧ್ವನಿ ಎತ್ತಿದ್ದು ಅದು ಕೇವಲ ಒಂಟಿ ಧ್ವನಿಯಾಗದೇ, ಸಕಾರಣವಾಗಿ ಅದು ಸಾಮೂಹಿಕ ಧ್ವನಿಯಾದದ್ದನ್ನು ಕಾಣುತ್ತೇವೆ. 'ನಾಮದಲ್ಲಿ ಹೆಂಗೂಸಾದಡೇನು? ಭಾವಿಸಲು ಗಂಡು ರೂಪು ನೋಡಾ ಬಸವಾ ನಿಮ್ಮ ದಯದಿಂದ' ಎಂಬುದಾಗಿ ಅಕ್ಕಮಹಾದೇವಿ ನುಡಿದರೆ, ಆಯ್ದಕ್ಕಿ ಲಕ್ಕಮ್ಮ, ಗೊಗ್ಗವ್ವೆ, ಸತ್ಯಕ್ಕನಂತಹ ತೀರ ನಿರ್ಲಕ್ಷಿತ ಸ್ತರಕ್ಕೆ ಸೇರಿದ ಮಹಿಳೆಯರೂ 'ಆತ್ಮಕ್ಕೆ ಅರಿವೊಂದೆ ಕುರುಹಲ್ಲದೆ ಸ್ತ್ರೀ ಪುರಷರೆಂಬ ಭೇದವಿಲ್ಲ. 'ಉಭಯದ ಜ್ಞಾನ ಹೆಣ್ಣೋ–ಗಂಡೋ ನಾಸ್ತಿನಾಥ' ಎಂದು ಗೊಗ್ಗವ್ವೆ ನುಡಿದರೆ, ಆಯ್ದಕ್ಕಿ ಲಕ್ಕಮ್ಮ 'ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ?' ಎಂದು ಪ್ರಶ್ನಿಸುತ್ತಾಳೆ. ಪ್ರಾಕೃತಿಕ ಭೇದದಿಂದ ಸ್ತ್ರೀ ಪುರುಷರಲ್ಲಿ ತರತಮಭಾವ ಸಲ್ಲಬಹುದು. ಆದರೆ ಜ್ಞಾನದ ದೃಷ್ಟಿಯಿಂದ ಸ್ತ್ರೀ ಪುರಷರೆಂಬ ಭೇದಭಾವ ಸಲ್ಲದೆಂಬುದನ್ನು ಸತ್ಯಕ್ಕನೂ ತನ್ನ ವಚನವೊಂದರ ಮೂಲಕ ನಿರೂಪಿಸುತ್ತಾಳೆ.

"ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲ್ಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಏತರ ಹಣ್ಣಾದರೂ ಮಧುರವೆ ಕಾರಣ
ಅಂದವಿಲ್ಲದ ನೀನೆ ಬಲ್ಲೆ ಶಂಭು ಜಕ್ಕೇಶ್ವರಾ"[3]

ಎಂಬ ಮಾತಿನಲ್ಲಿ ಸ್ತ್ರೀ ಪುರುಷರ ನಡುವಿನ ಸಮಾನತೆಯ ಸಮರ್ಥನೆಯೊಂದಿಗೆ, ಸಾಮಾಜಿಕವಾಗಿ, ಧಾರ್ಮಿಕವಾಗಿ, ವೈಚಾರಿಕವಾಗಿ, ಅವಕಾಶವಂಚಿತಳಾದ ಸ್ತ್ರೀಯ ಕುರಿತಾಗಿ ಜಾಗೃತವಾಗಿರುವ ಸಾಮಾಜಿಕ ಪ್ರಜ್ಞೆಯಿದೆ. ಫಲ ಯಾವುದಾದರೇನು? ಮಾಧುರ್ಯವೇ ಮುಖ್ಯ, ಕುಸುಮ ಯಾವುದಾದರೇನು? ಸುವಾಸನೆಯೇ ಮುಖ್ಯ, ಅಂತೆಯೇ ಶೋಧನೆಗೆ ಭೇದವಿದೆಯೇ ಹೊರತು ಸಾಧನೆಗೆ ಭೇದವಿಲ್ಲ. ಆದ್ದರಿಂದ ಸ್ತ್ರೀ ಪುರಷರೆಂಬ ಭೇದ ಬಲ್ಲವರ ನೀತಿಯಲ್ಲ. ಲೋಕದ ಮೂಢ ಜನರ ದೃಷ್ಟಿಕೋನದಲ್ಲಿ ಮಾತ್ರ ಈ ರೀತಿಯಾಗಿ ಪ್ರಕೃತಿ ಸಹಜವಾದ ಜೈವಿಕ ಲಕ್ಷಣಗಳು ಆತ್ಮ ಶಕ್ತಿಯನ್ನು ವ್ಯತ್ಯಸ್ಥಗೊಳಿಸವವೆನ್ನುವ ಆರೋಪಿತ ಪ್ರವೃತ್ತಿಯನ್ನು ದೂರ ತಳ್ಳುತ್ತ ಸ್ತ್ರೀ ಸಂಬಂಧಿಯಾದ ಅನೇಕ ತಪ್ಪು ಗ್ರಹಿಕೆಗಳನ್ನು ನಿವಾರಿಸುತ್ತಾ ಅಭೇದ ಅವಿನಾಶಿ ನಿರಾಕಾರಿ ಸ್ವರೂಪಿಯಾದ 'ಆತ್ಮ'ನ ವಿಶ್ಲೇಷಣೆಗೆ ತೊಡಗುತ್ತಾಳೆ.

ಸತ್ಯಕ್ಕನ ಕೆಲವು ವಚನಗಳಿಗೆ ಶರಣಸತಿ ಲಿಂಗಪತಿ ಭಾವವೇ ಮೂಲದ್ರವ್ಯವಾಗಿದೆ. ಸತಿಪತಿಭಾವದಲ್ಲಿ, ಜೀವಾತ್ಮ ಪರಮಾತ್ಮರ ಅನುಸಂಧಾನವನ್ನು ಲೌಕಿಕ ಜಗತ್ತಿನ ಹೆಣ್ಣುಗಂಡುಗಳ ಸಾಮರಸ್ಯಪೂರ್ಣ ಪ್ರೇಮಾನುಸಂಧಾನಕ್ಕೆ ಹೋಲಿಸಲಾಗಿದೆ. ಸತಿಪತಿಭಾವವು ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಎಂಬ ಐದು ಭಾವಗಳಲ್ಲಿ ವ್ಯಕ್ತವಾಗುತ್ತಿದ್ದು, ಸತ್ಯಕ್ಕನ ವಚನಗಳಲ್ಲಿ ಶಾಂತ ಮಧುರಭಾವ ಮರುದನಿಗೊಂಡಿದೆ. 'ಹೊರಗಿದ್ದನೆಂದು ನಾನು ಮರೆದು ಮಾತನಾಡಿದೆ. ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು' 'ಮರೆದಡೆ ಎಚ್ಚರಿಸುವ ಕುರಹಿಲ್ಲದ ಗಂಡನು ತನ್ನನರಿದಡೆ ಒಳ್ಳಿದನವ್ವಾ'

"ಇನಿಯಂಗೆ ತವಕವಿಲ್ಲ ಎನಗೆ ಸೈರಣೆಯಿಲ್ಲ
ಮನದಿಚ್ಛೆಯನರಿವ ಸಖಿಯರಿಲ್ಲ ಇನ್ನೇವೆನವ್ವಾ?
ಮನ್ಮಥ ವೈರಿಯ ಅನುಭಾವದಲ್ಲಿ ಎನ್ನ ಮನ ಸಿಲುಕಿ
ಬಿಡದು ಇನ್ನೇನ ಮಾಡುವೆನೆ ಕರುಣವಿಲ್ಲದ ತಾಯೆ?
ದಿನ ವೃಥಾ ಹೋಯಿತ್ತಾವೆ ಯೌವನ ಬಿಸರವಾಗದ ಮುನ್ನ
ಪಿನಾಕಿಯ ನೆರಹವ್ವಾ ಶಂಭು ಜಕ್ಕೇಶ್ವರನಾ"[4]

ಎಂಬುದಾಗಿ, ಪರಮಾತ್ಮನನ್ನೇ ಪತಿಯಾಗಿ ಗ್ರಹಿಸಿ ಅವನನ್ನು ಸೇರುವ ತವಕವನ್ನು, ಆರ್ತ ಮನೋಭಾವವನ್ನು ಈ ವಚನದಲ್ಲಿ ಕಾಣಬಹುದು. ವೃಥಾ ದಿನ ಕಳೆಯದೆ ಯೌವನ ಬೀಸರವಾದ ಮುನ್ನವೇ ಪಿನಾಕಿಯನ್ನು ಸೇರಬೇಕೆನ್ನುವ ತವಕ ಅವಳದು.

'ಭಾವನೇಕೆ ಬಾರನೆನ್ನಮನೆಗೆ ಆತನನ್ನು ಕರೆದು ತಾರವ್ವ, ಶಂಭುಜಕ್ಕೇಶ್ವರನ ನೆರೆದು ನೋಡುವೆನು' ಎನ್ನುವಲ್ಲಿ ಸ್ತ್ರೀ ಸಹಜವಾದ ಹಂಬಲ ಒತ್ತಾಸೆಗಳ ಭಾವ ಸೌಂದರ್ಯ, ತಾನೆ ತಾನಾಗಿಯೇ ಹೊರಹೊಮ್ಮಿದೆ.

"ಮೆಚ್ಚಿಗ್ರಾಹಿಗೊಂಡೆನು ನಿಮಗಾನು
ನಲ್ಲನೆ, ಒಚ್ಚ ತವೋದವಳನುಳಿವರೆ?
ವಿಕಳಗೊಂಡೇನು ಶಿವಶಿವಾ?

ಪ್ರಾಣ ಪದವಲ್ಲದೆ ಮತ್ತೊಂದನರಿಯೆನು
ಮನವಚನಕಾಯದಲ್ಲಿ ಉಚಿತವೆ ನಿಮಗೆ
ಪುರುಷ ಲಕ್ಷಣವೆ ನಿಮಗೆ?
ಅತಃ ಪರಗಂಡರ ನಾನು ಬಲ್ಲಡೆ ಕರ್ತೃ ನಿಮ್ಮಾಣೆ ಶಂಭುಜಕ್ಕೇಶ್ವರಾ"[5]

ಶಿವನನ್ನೇ ಮೆಚ್ಚಿ ಒಪ್ಪಿ ಅಪ್ಪಿಕೊಂಡ ಸತ್ಯಕ್ಕ ಮನ ವಚನ ಕಾಯಗಳಲ್ಲಿ ತ್ರಿಕರಣ ಶುದ್ಧಿಯಿಂದ ಅವನನ್ನೇ ಆರಾಧಿಸುತ್ತ ಅವನ ವಿರಹ, ವೇದನೆಯನ್ನು ಅನುಭವಿಸುತ್ತಿರುವವಳು. ಅವನನ್ನುಳಿದರೆ ಆನ್ಯದೈವವನ್ನರಿಯದ ಏಕ ದೈವ ನಿಷ್ಠೆ ಅವಳದು. ಈ ನಿಟ್ಟಿನಲ್ಲಿ ಸತ್ಯಕ್ಕನ ವಚನಗಳು ಪರಮಾತ್ಮನ ಸಾನಿಧ್ಯ ಸುಖ ಸರ್ವ ಸಮರ್ಪಣ ಮಧುರಭಾವನೆಗಳಿಂದಾಗಿ ಮಹಾದೇವಿಯಕ್ಕನ ವಚನಗಳನ್ನು ನೆನಪಿಗೆ ತಂದುಕೊಡುತ್ತವೆ. ವ್ರತ–ನೇಮ, ಆಚಾರ–ಶೀಲ ಸಂಬಂಧೀ ವಿಚಾರಗಳು ಸತ್ಯಕ್ಕನ ನಿಲುವಿನಲ್ಲಿ ಕೇವಲ ಬಹಿರಂಗದ ಕ್ರಿಯೆಗಳು ಮಾತ್ರವಾಗಿರದೆ, ಭಾವಶುದ್ಧಿ, ಕ್ರಿಯಾಶುದ್ಧಿಯ ಮಾನದಂಡಗಳಾಗಿವೆ. ವ್ರತ ನೇಮಗಳು ದೈನಂದಿನ ಆಚರಣೆಗಳಿಂದ ಅರಿಷಡ್ವರ್ಗಾದಿಗಳನ್ನು ಪಾರಮಾರ್ಥಿಕ ಸಾಧನೆಗೆ ಸಜ್ಜುಗೊಳಿಸುವ, ಪರಿಷ್ಕರಿಸುವ ಕಮ್ಮಟಗಳಾಗಿವೆ. ಅಂತೆಯೇ

"ಅರ್ಚನೆ ಪೂಜನೆ ನೇಮವಲ್ಲ: ಮಂತ್ರ ತಂತ್ರ ನೇಮವಲ್ಲ
ಧೂಪ ದೀಪಾರತಿ ನೇಮವಲ್ಲ
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪುದೇ ನೇಮ
ಶಂಭು ಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯ ನೇಮ"[6]

ಎಂದು ಹೇಳುವ ಸತ್ಯಕ್ಕನ ಅಭಿಪ್ರಾಯದಲ್ಲಿ ಬಹಿರಂಗದ ಅರ್ಚನೆ, ಮಂತ್ರ, ತಂತ್ರ, ಧೂಪ, ದೀಪಗಳಾವವೂ ನೇಮವಲ್ಲ. ಪರಸ್ತ್ರೀ ಪರಧನ ಪರದೈವಕ್ಕೆಗದ ಏಕನಿಷ್ಠೆ ನಿಜ ಭಕ್ತನ ನೇಮ. ದೇವರೆಂದು ಪೂಜಿಸಿ, ಅರ್ಚಿಸಿ, ಭಾವಿಸಿ ಮತ್ತೆ ತ್ರಿವಿಧವ ಮುಟ್ಟಿದರೆಂದು ಕಷ್ಟ ಗುಣವ ನುಡಿವ ಭಕ್ತಿ ಹೀನರರನ್ನು ಕಂಡರೆ ಅವಳಿಗಾಗದು. ನೇಮ ಎಂದರೆ ಜೀವಾತ್ಮನ ಅಧೋಮುಖಿ ಪ್ರವೃತ್ತಿಗಳನ್ನು ನಿಗ್ರಹಿಸಿ ಅವಧರಿಸುವ ಕುಲಕುಠಾರ.

"ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆ
ಅದೇನು ಕಾರಣವೆಂದರೆ ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೆಶ್ವರ"[7]

"ಲಂಚ ವಂಚನಕ್ಕೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನ ವಸ್ತ್ರ ಬಿದ್ದಿದ್ದಡೆ
ಕೈ ಮುಟ್ಟಿ ಎತ್ತಿದೆನಾದಡೆ ಅಯ್ಯಾ ನಿಮ್ಮಾಣೆ
ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯ
ಶಂಭು ಜಕ್ಕೇಶ್ವರ ದೇವಯ್ಯ ನಿಮ್ಮಾಣೆ"[8]

ನಿಜ ಭಕ್ತನಿಗೆ ಅಂತರಂಗ ಶುದ್ಧವಾಗಿರಬೇಕು. 'ನಡೆಶುದ್ಧ, ನುಡಿಶುದ್ಧ, ವಿರ್ಪುದೇ ನೇಮ. ಪರಧನಕ್ಕೆ ಒಡಲಾಗದಿರ್ಪುದೆ ನೇಮ, ಶಿವಭಕ್ತರ ಮನೆಯಂಗಳದ ಕಸಗುಡಿಸುವ ಕಾಯಕದಲ್ಲಿ ನಿರತಳಾದ ಸತ್ಯಕ್ಕನದು, ಲಂಚ ವಂಚನೆಗೆ ಕೈಚಾಚದ ಭಾಷೆ ದಾರಿಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೂ, ಕೈ ಮುಟ್ಟಿ ಎತ್ತಿದೆನಾದಡೆ ನಿಮ್ಮಾಣೆ. ನೀನಾಗಲೇ ಎನ್ನ ನರಕದಲ್ಲಿ ಅದ್ದಿ ನೀನೆದ್ದು ಹೋಗಾ' ಎನ್ನುವಲ್ಲಿ ಸತ್ಯಕ್ಕನ ತೀಕ್ಷ್ಣ ನಿಷ್ಠುರತೆ, ನೀತಿಪೂರ್ಣವಾದ ಬದುಕು, ಕಾಯಕ ಪ್ರೇಮ, ಆತ್ಮ ಸನ್ಮಾನ, ಪ್ರಾಮಾಣಿಕತೆಗಳ ವಿಶಾಲ ದರ್ಶನವಾಗುತ್ತದೆ. ಬಯಕೆ ಬರಿದಾಗಿ ಭ್ರಾಮಕ ಸ್ಥಿತಿಯಿಂದ ಮುಕ್ತನಾಗಿ ನಿರ್ವಿಕಾರಭಾವದಿಂದ ಪರಮಾತ್ಮನ ಕೃಪೆಯನ್ನು ಯಾಚಿಸುವ ನಿರ್ಮೋಹ ಸ್ಥಿತಿ ಸತ್ಯಕ್ಕನದು. ವಿಚಾರ ಶುದ್ಧಿಗಳು ಭಕ್ತನ ಗುರಿಯಾಗಬೇಕು. ಆಡುವ ಮಾಡುವ ಪ್ರತಿಯೊಂದು ಮಾಟದಲ್ಲಿಯೂ ಕ್ರಿಯಾ–ಜ್ಞಾನ ಶುದ್ಧಿಗಳ ಸಾಮರಸ್ಯದ ಎಚ್ಚರ ಭಕ್ತನನ್ನು ನಿಯಂತ್ರಿಸಬೇಕೆಂದೂ ಧ್ವನಿತವಾಗುವ ಈ ವಚನದ ಮೂಲಕ ಮನುಷ್ಯ ಸ್ವಭಾವದ ದೌರ್ಬಲ್ಯಗಳೊಂದಿಗೆ ರಾಜಿ ಮಾಡಿಕೊಳ್ಳದ ಖಂಡಿತವಾದಿಯಾಗಿ ಕಂಡು ಬರುತ್ತಾಳೆ ಸತ್ಯಕ್ಕ.

ಜ್ಞಾನ ಸಂಪಾದನೆಗೆ ವಿಮುಖರಾಗಿ ಶುಷ್ಕ ಸಂಪ್ರದಾಯಗಳಿಗೆ ಜೋತುಬಿದ್ದು, ಧಾರ್ಮಿಕ ಮೂಲಭೂತವಾದಿಗಳನ್ನು ನಿರ್ಭಯವಾಗಿ ವಿಡಂಬಿಸುತ್ತಾಳೆ. ಪಾಪ–ಪುಣ್ಯ ಇಹಪರಗಳಿಗೆ ಹೊರಗಾದ ಗುರು–ಶಿಷ್ಯ–ಜಂಗಮರ ಡಾಭಿಂಕ ವೇಷಭೂಷಣಗಳನ್ನು ಆಡಂಬರದ ಭಕ್ತಿಯ ಆಚರಣೆಗಳನ್ನು ಖಂಡಿಸುತ್ತಾಳೆ. ಶಿವಾಜ್ಞೆಯಿಂದ ತೊಟ್ಟು ಕಳಚಿದ ಹಣ್ಣಿನಂತೆ, ಆವ ಜಾತಿಯಲ್ಲಿ ಜನಿತವಾದಡೇನು? ಪೂರ್ವ ಗುಣಧರ್ಮ ಲೋಕಾಚಾರಗಳನ್ನುಳಿದು ಪಂಚಮಹಾತಕಗಳನಳಿದು, ಸತ್ಯ ಶರಣರ ಸಂಗದಲ್ಲಿ ಸತ್ಯ ನಡೆನುಡಿಗಳಿಂದ ಲಿಂಗಾಚಾರ ಮೋಹಿಯಾಗಿ ಬಂದ ಶಿಷ್ಯನಿಗೆ ಅಂಗದ ಮಲಿನವ ತೊಡೆದು ಚಿದ್ಅಂಗವ ಮಾಡಿ, ಚಿದ್ಘನ ಲಿಂಗನ ಸಂಬಂಧಿಸಿ ಇಪ್ಪತ್ತೊಂದು ದೀಕ್ಷೆಯ ಕರಾಣಿಸುವವನೇ ತ್ರಿನೇತ್ರವುಳ್ಳ ಗುರು. ತ್ರಿವಿಧ ಲಿಂಗಾನುಭಾವ ಭೋಧಿಸುವವನೇ ಸರ್ವಾಂಗಲೋಚನವುಳ್ಳ ಜಂಗಮ. ಹೀಗಿರದೆ ಸತ್ಯ ಸದಾಚಾರಗಳಲ್ಲಿ ನಡೆಯದೆ ಲೋಕದ ಜಡಜೀವಿಯಂತೆ, ಪಂಚಮಹಾಪಾತಕಗಳಿಗೆ ಬಲಿಯಾಗಿ ದ್ರವ್ಯಾಭಿಲಾಷೆಯಿಂದ ದೀಕ್ಷೆಯನ್ನು ಕರುಣಿಸುವ ಗುರು ಹುಟ್ಟ ಅಂಧಕ, ಷಟ್‌ಸ್ಥಲವ ಹೇಳುವ ಅಂತಹ ಜಂಗಮ ಕೆಟ್ಟಗಣ್ಣವನು ಎಂಬುದಾಗಿ ದಿಟ್ಟನುಡಿವ ಸತ್ಯಕ್ಕನ ಶೈಲಿಯಲ್ಲಿ ಗಟ್ಟಿತನವಿದೆ.

ಸತ್ಯಕ್ಕ ಸ್ವತಂತ್ರ ಮನೋಧರ್ಮದ ನಿರ್ಭಿತ ಶರಣೆ, ಶರಣಧರ್ಮದಲ್ಲಿ ಅಗಾಧ ನಿಷ್ಠೆಯುಳ್ಳ ಅನುಭಾವಿ, ಅರಿವನ್ನು ಸಾಧಿಸಿಕೊಂಡ ಜ್ಞಾನಿ, ಅವಳ ದೃಷ್ಟಿಯಲ್ಲಿ 'ಲಿಂಗೈಕ್ಯವೆನ್ನುವುದು ಉದಕದೊಳಗಣ ಕಿಚ್ಚಿನಂತೆ ವಾಯುನುಂಗಿದ ಪರಿಮಳ, ಉರಿಯೊಳಡಗಿದ ಕರ್ಪೂರದಂತೆ, ಅರಿವು ನುಂಗಿದ ಮರಹಿನಂತೆ.' ಶರಣನಾದವನು ನಿರ್ಲಿಪ್ತನಾಗಿದ್ದುಕೊಂಡು ಜೀವನದ ಸ್ಥಿತ್ಯಂತರಗಳನ್ನು ಎದುರಿಸಬೇಕೆಂದು ಹೇಳುವ ಧೈರ್ಯವನ್ನಿಲ್ಲಿ ಗುರುತಿಸಬಹುದು, ಅಜಗಣ್ಣನ ಆಗಲುವಿಕೆಯಿಂದ ದುಃಖಿತಳಾದ ಮುಕ್ತಾಯಕ್ಕನ ಸ್ಥಿತಿಯನ್ನು ಕಂಡು 'ಕಾರಣದಿಂದ ಕಾಯುವ ಬಿಟ್ಟಡೆ ಶೋಕವೇಕೆ? ಶಿವಭಕ್ತರು ಶಿವಾತ್ಮಸ್ವರೂಪು.'

"ಭಕ್ತರಿಗೆ ಅಕ್ಕೆ ಶೋಕ ದುಃಖವುಂಟೆ ಅಯ್ಯಾ?
ಅತ್ತು ಕಳೆವ ನೋವ ಹಾಡಿ ಕಳೆಯಲೇಕಯ್ಯಾ?
ಈ ಮುಕ್ತಾಯಕ್ಕಗಳ ಕಕ್ಕುಲತೆಯ
ಶಂಭು ಜಕ್ಕೇಶ್ವರನ ಶರಣರೊಪ್ಪರಯಾ"9

ಶಿವಸ್ವರೂಪನಾದ ಭಕ್ತ ಪರಶಿವನ ಒಂದಂಶನಾಗಿದ್ದು. ಪುನಃ ಆ ಅಂಶ ಶಿವನಲ್ಲಿ ಲೀನದಾದರೆ ವೃಥಾ ದುಃಖವೇಕೆ, ಶೋಕವೇಕೆ? ಭಕ್ತರಿಗೆ ಶೋಕವೆಂಬುದಿಲ್ಲವೆಂದು ಹೇಳುತ್ತಾಳೆ ಸತ್ಯಕ್ಕ.

ಒಟ್ಟಿನಲ್ಲಿ ಶೈಕ್ಷಣಿಕ–ಧಾರ್ಮಿಕ–ಸಾಮಾಜಿಕ ಅವಕಾಶಗಳು ಮಹಿಳೆಗೆ ಶೂನ್ಯವಾಗಿದ್ದ ಸಂದರ್ಭದಲ್ಲಿ ತೀರ ಸಾಮಾನ್ಯವರ್ಗದ ಮಹಿಳೆ ತನ್ನ ವ್ರತ–ಆಚಾರ–ನೇಮಗಳನ್ನು ಪ್ರಾಣಕ್ಕಿಂತ ಅಧಿಕವಾಗಿ ಭಾವಿಸಿ, ವೀರ ನಿಷ್ಠೆಯನ್ನು ಪ್ರದರ್ಶಿಸಿ, ಶಿವನಿಷ್ಠಾಪಾರಮ್ಯವನ್ನು ಮೆರೆದು ತನ್ನ ಸ್ವಾನುಭವಕ್ಕೆ ಧ್ವನಿ ನೀಡಿದ್ದು, ಜಡವ್ಯವಸ್ಥೆಯ ಪರಿವರ್ತನೆಗೆ ಪ್ರಾಮಾಣಿಕವಾಗಿ ಪ್ರತಿಕ್ರಿಯಿಸಿದ್ದು ಮಹತ್ವದ ಸಂಗತಿ. ಅಲ್ಲಲ್ಲಿ ಅವಳ ಹಿರಿಯ ಸಮಕಾಲೀನ ಶರಣರ ವಚನಗಳ ಪ್ರಭಾಮ ಭಾವ–ಭಾಷೆಯ ದೃಷ್ಟಿಯಿಂದ ತೋರುತ್ತಿದ್ದರೂ ಅವಳ ವಚನಗಳಲ್ಲಿ ಸ್ವಂತಿಕೆ ಇದೆ. ಶೈಲಿಯಲ್ಲಿ ಮೊನಚಿದೆ, ಒತ್ತಾಯವಿದೆ. ಅಧಿಕಾರವಾಣಿ ಇದೆ. ಈ ನಿಟ್ಟಿನಲ್ಲಿ ಸತ್ಯಕ್ಕ ಶರಣರ ಆಚಾರ ವಿಚಾರಗಳ ಪ್ರಭಾವಲಯದಲ್ಲಿದ್ದುಕೊಂಡು ಅರಿವಿನಿಂದ ಹಿರಿತನವನ್ನು ಸಾಧಿಸಿದ ಶಿವಶರಣೆ.

**ಕೊನೆಯ ಟಿಪ್ಪಣಿಗಳು:**

1. ವೀರಣ್ಣ ರಾಜೂರ, ಶಿವಶರಣೆಯರ ವಚನ ಸಂಪುಟ–5, ಪು.212.
2. ಅದೇ, ಪು.212.
3. ಅದೇ, ಪು.326
4. ಅದೇ, ಪು.311.
5. ಪು.216
6. ಪು. 209
7. ಪು. 314
8. ಅದೇ, ಪು. 316
9. ಅದೇ, ಪುಟ.315